**All India Radio: Bangalore**
**National Bulletin In Kannada**
**08.02.2026 1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**08.02.2026 1.10 p.m.**

**<><><><>**

ಮುಖ್ಯಾಂಶಗಳು

1. ಭಾರತ-ಮಲೇಷ್ಯಾ ಪ್ರಧಾನಿಗಳ ದ್ವಿಪಕ್ಷೀಯ ಮಾತುಕತೆ; ಭದ್ರತೆ, ಸೆಮಿಕಂಡಕ್ಟರ್ ಅಭಿವೃದ್ಧಿ, ಭ್ರಷ್ಟಾಚಾರ ನಿಗ್ರಹ, ಸೇರಿದಂತೆ ಹಲವಾರು ಒಪ್ಪಂದಗಳ ವಿನಿಮಯ
2. ಛತ್ತೀಸ್‌ಗಢದ ಎಡಪಂಥೀಯ ತೀವ್ರವಾದ ಪೀಡಿತ ಪ್ರದೇಶಗಳಲ್ಲಿ ಕೇಂದ್ರ ಸಚಿವ ಅಮಿತ್ ಶಾ ಅವರಿಂದ ಭದ್ರತೆ ಹಾಗೂ ಅಭಿವೃದ್ಧಿ ಯೋಜನೆಗಳ ಪರಿಶೀಲನೆ
3. ಆದಾಯ ತೆರಿಗೆ ಕಾಯ್ದೆ- ೨೦೨೫: ಪ್ರಸ್ತಾವಿತ ನಿಯಮಗಳು ಮತ್ತು ನಮೂನೆಗಳ ಕುರಿತು ಪಾಲುದಾರರಿಂದ ಸಲಹೆಗಳನ್ನು ಆಹ್ವಾನಿಸಿದ ಸಿಬಿಡಿಟಿ
4. ವಿಶ್ವಕಪ್ ಟಿ-೨೦ ಕ್ರಿಕೆಟ್: ದಿನದ ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡಕ್ಕೆ ೧೮೩ ರನ್‌ಗಳ ಗುರಿ ನೀಡಿದ ಅಫ್ಘಾನಿಸ್ತಾನ

<><><><>

ಎರಡು ದಿನಗಳ ಮಲೇಷಿಯಾ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಕೌಲಾಲಂಪುರದಲ್ಲಿಂದು ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಭದ್ರತೆ, ವಿಪತ್ತು ನಿರ್ವಹಣೆ, ಸೆಮಿಕಂಡಕ್ಟರ್ ಅಭಿವೃದ್ಧಿ, ಆಡಿಯೋ-ವಿಶುವಲ್ ಸಹ-ನಿರ್ಮಾಣ, ಭ್ರಷ್ಟಾಚಾರ ನಿಗ್ರಹ, ಸೇರಿದಂತೆ ಹಲವಾರು ಒಪ್ಪಂದಗಳನ್ನು ವಿನಿಮಯ ಮಾಡಿಕೊಳ್ಳಲಾಯಿತು. ಭಯೋತ್ಪಾದನೆ ನಿಗ್ರಹ, ಗುಪ್ತಚರ ಮಾಹಿತಿ ಹಂಚಿಕೆ, ಕಡಲ ಭದ್ರತೆ ಮತ್ತು ರಕ್ಷಣೆಯಲ್ಲಿ ಉಭಯ ದೇಶಗಳ ನಡುವಿನ ಸಹಕಾರವು ವಿಸ್ತರಿಸುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಮಾತುಕತೆಯಲ್ಲಿ ತಿಳಿಸಿದ್ದಾರೆ. ಇಂಧನ, ಮೂಲಸೌಕರ್ಯ, ಉತ್ಪಾದನೆ ಮತ್ತು ಡಿಜಿಟಲ್ ಆರ್ಥಿಕತೆಯಲ್ಲಿ ಎರಡೂ ದೇಶಗಳ ಸಹಕಾರವು ಬೆಳೆಯುತ್ತಿದೆ. ಕೃತಕ ಬುದ್ಧಿಮತ್ತೆ, ಅರೆವಾಹಕಗಳು, ಆರೋಗ್ಯ ಮತ್ತು ಆಹಾರ ಭದ್ರತೆಯಲ್ಲೂ ಸಹಯೋಗವು ಆಳವಾಗುತ್ತದೆಎಂದು ಅವರು ಹೇಳಿದರು. ಭಯೋತ್ಪಾದನೆಯ ವಿರುದ್ಧ ಭಾರತದ ನಿಲುವು ಸ್ಪಷ್ಟವಾಗಿದೆ, ಭಯೋತ್ಪಾದನೆಯ ಬಗ್ಗೆ ಯಾವುದೇ ದ್ವಿಮುಖ ಮಾನದಂಡಗಳು ಮತ್ತು ರಾಜಿ ಸಾಧ್ಯವಿಲ್ಲ ಎಂದು ಪ್ರಧಾನಿ ತಿಳಿಸಿದರು.

ಕಡಲ ನೆರೆಹೊರೆಯವರಾಗಿ ಭಾರತ ಮತ್ತು ಮಲೇಷ್ಯಾ, ವಿಶೇಷ ಬಾಂಧವ್ಯವನ್ನು ಹಂಚಿಕೊಂಡಿವೆ. ಮಲೇಷ್ಯಾದಲ್ಲಿ ತಮಿಳು ಭಾಷೆ ಸೇರಿದಂತೆ ಭಾರತದೊಂದಿಗಿನ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಸಂಬಂಧಗಳ ಕುರಿತು ಪ್ರಧಾನಿ ಒತ್ತಿ ಹೇಳಿದರು. ಭಾರತವು ಆಸಿಯಾನ್ ಒಕ್ಕೂಟದ ಕೇಂದ್ರೀಕರಣಕ್ಕೆ ಬದ್ಧವಾಗಿದೆ. ಆಸಿಯಾನ್‌ನ ಅಧ್ಯಕ್ಷತೆಯನ್ನು ವಹಿಸಲಿರುವ ಮಲೇಷ್ಯಾವನ್ನು ಪ್ರಧಾನಿ ಅಭಿನಂದಿಸಿದರು. ಆಸಿಯಾನ್-ಭಾರತ ಸರಕು ವ್ಯಾಪಾರ ಒಪ್ಪಂದದ ಪರಿಶೀಲನೆಯನ್ನು ಆದಷ್ಟು ಬೇಗ ಪೂರ್ಣಗೊಳಿಸಲು ಉಭಯ ದೇಶಗಳು ಒಪ್ಪಿಕೊಂಡಿವೆ ಎಂದು ಅವರು ತಿಳಿಸಿದರು. ಇಂಡೋ-ಪೆಸಿಫಿಕ್ ಪ್ರದೇಶವು ಬೆಳವಣಿಗೆಯ ಎಂಜಿನ್ ಆಗಿ ಹೊರಹೊಮ್ಮುತ್ತಿದೆ ಹಾಗೂ ಭಾರತ ಮತ್ತು ಮಲೇಷ್ಯಾ ಈ ಪ್ರದೇಶದಲ್ಲಿ ಅಭಿವೃದ್ಧಿ, ಶಾಂತಿ ಮತ್ತು ಸ್ಥಿರತೆಗಾಗಿ ಒಟ್ಟಾಗಿ ಕೆಲಸ ಮಾಡುತ್ತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ವಿಶ್ವಾಸ ವ್ಯಕ್ತಪಡಿಸಿದರು.

<><><><>

ಛತ್ತೀಸ್‌ಗಢದ ಎಡಪಂಥೀಯ ತೀವ್ರವಾದ ಪೀಡಿತ ಪ್ರದೇಶಗಳಲ್ಲಿ ಭದ್ರತಾ ವ್ಯವಸ್ಥೆಗಳು ಮತ್ತು ಅಭಿವೃದ್ಧಿ ಯೋಜನೆಗಳನ್ನು ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಪರಿಶೀಲಿಸುತ್ತಿದ್ದಾರೆ. ರಾಯ್‌ಪುರದಲ್ಲಿಂದು ಎರಡು ಉನ್ನತ ಮಟ್ಟದ ಸಭೆಗಳನ್ನು ಸಹ ಅವರು ನಡೆಸುತ್ತಿದ್ದಾರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಿರಿಯ ಅಧಿಕಾರಿಗಳು, ಭದ್ರತಾ ಸಂಸ್ಥೆಗಳ ಪ್ರತಿನಿಧಿಗಳು ಈ ಸಭೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಇಂದು ಸಂಜೆ ನಡೆಯಲಿರುವ "ಛತ್ತೀಸ್‌ಗಢ @೨೫: ಶಿಫ್ಟಿಂಗ್ ದಿ ಲೆನ್ಸ್" ಎಂಬ ರಾಷ್ಟ್ರೀಯ ಸಮಾವೇಶದಲ್ಲಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಈ ಮಧ್ಯೆ, ನಾಳೆ ಜಗದಲ್‌ಪುರದಲ್ಲಿ ನಡೆಯಲಿರುವ ಬಸ್ತರ್ ಪಾಂಡಮ್ ಉತ್ಸವದ ಸಮಾರೋಪ ಸಮಾರಂಭದಲ್ಲಿ ಅವರು ಪಾಲ್ಗೊಳ್ಳಲಿದ್ದಾರೆ.

<><><>

ಅಕ್ರಮ ವಲಸೆ ವಿರುದ್ಧದ ಪ್ರಮುಖ ಕಾರ್ಯಾಚರಣೆಯಲ್ಲಿ, ನಕಲಿ ಗುರುತಿನ ದಾಖಲೆಗಳನ್ನು ಬಳಸಿಕೊಂಡು ನಗರದಲ್ಲಿ ಅಕ್ರಮವಾಗಿ ವಾಸಿಸುತ್ತಿದ್ದ ನಾಲ್ವರು ಬಾಂಗ್ಲಾದೇಶಿ ಪ್ರಜೆಗಳನ್ನು ಮುಂಬೈ ಪೊಲೀಸರು ಬಂಧಿಸಿದ್ದಾರೆ. ಮಲಾಡ್ ಪೂರ್ವದ ಪಠಾಣ್‌ವಾಡಿ ಪ್ರದೇಶದಲ್ಲಿ ನಡೆಸಿದ ಸಂಘಟಿತ ಕಾರ್ಯಾಚರಣೆಗಳ ಸರಣಿಯ ನಂತರ ಈ ಬಂಧನಗಳನ್ನು ಮಾಡಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ಇಂದು ತಿಳಿಸಿದ್ದಾರೆ. ಕುರಾರ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅಕ್ರಮವಾಗಿ ವಾಸಿಸುತ್ತಿರುವ ಮತ್ತು ನಕಲಿ ಗುರುತಿನ ಚೀಟಿಗಳನ್ನು ಬಳಸಿಕೊಂಡು ತಮ್ಮನ್ನು ತಾವು ಉಳಿಸಿಕೊಳ್ಳುತ್ತಿರುವ ಬಾಂಗ್ಲಾದೇಶಿ ಪ್ರಜೆಗಳ ಬಗ್ಗೆ ನಿರ್ದಿಷ್ಟ ಗುಪ್ತಚರ ಮಾಹಿತಿ ಆಧರಿಸಿ ಈ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮಾಹಿತಿಯ ಮೇರೆಗೆ, ಫೆಬ್ರವರಿ ೨, ೪ ಮತ್ತು ೬ ರಂದು ಜಂಟಿ ದಾಳಿಗಳನ್ನು ನಡೆಸಲಾಗಿತ್ತು. ದಾಳಿಗಳ ಸಮಯದಲ್ಲಿ, ಪಠಾಣ್‌ವಾಡಿಯ ವಿವಿಧ ಸ್ಥಳಗಳಿಂದ ನಾಲ್ವರು ಶಂಕಿತರನ್ನು ಬಂಧಿಸಲಾಯಿತು. ನಿರಂತರ ವಿಚಾರಣೆಯ ನಂತರ, ಅವರು ಮಾನ್ಯ ಪ್ರಯಾಣ ಅಥವಾ ವಲಸೆ ದಾಖಲೆಗಳಿಲ್ಲದೆ ಭಾರತಕ್ಕೆ ಪ್ರವೇಶಿಸಿದ ಬಾಂಗ್ಲಾದೇಶಿ ನಾಗರಿಕರು ಎಂದು ಒಪ್ಪಿಕೊಂಡರು. ಪ್ರಾಥಮಿಕ ತನಿಖೆಯು ಅವರ ಬಾಂಗ್ಲಾದೇಶಿ ರಾಷ್ಟ್ರೀಯತೆಗೆ ಸಂಬಂಧಿಸಿದ ಹಲವಾರು ದಾಖಲೆಗಳನ್ನು ಮರುಪಡೆಯಲು ಸಹಕಾರಿಯಾಯಿತು.

<><><>

ಕೇಂದ್ರೀಯ ನೇರ ತೆರಿಗೆ ಮಂಡಳಿ-ಸಿಬಿಡಿಟಿ, ಆದಾಯ ತೆರಿಗೆ ಕಾಯ್ದೆ-೨೦೨೫ ಕ್ಕೆ ಸಂಬಂಧಿಸಿದ ಪ್ರಸ್ತಾವಿತ ಆದಾಯ ತೆರಿಗೆ ನಿಯಮಗಳು ಮತ್ತು ನಮೂನೆಗಳ ಕುರಿತು ಪಾಲುದಾರರಿಂದ ಸಲಹೆಗಳನ್ನು ಆಹ್ವಾನಿಸಿದೆ. ಕಳೆದ ವರ್ಷ ಆಗಸ್ಟ್‌ನಲ್ಲಿ ರಾಷ್ಟ್ರಪತಿಗಳ ಒಪ್ಪಿಗೆ ಪಡೆದ ಆದಾಯ ತೆರಿಗೆ ಕಾಯ್ದೆ, ಈ ವರ್ಷದ ಏಪ್ರಿಲ್ ೧ ರಿಂದ ಜಾರಿಗೆ ಬರಲಿದೆ. ಅಂತಿಮ ಅಧಿಸೂಚನೆಗೂ ಮುನ್ನ, ಪ್ರಸ್ತಾವಿತ ಆದಾಯ ತೆರಿಗೆ ನಿಯಮಗಳು ಮತ್ತು ನಮೂನೆಗಳನ್ನು ಅಧಿಕೃತ ವೆಬ್‌ಸೈಟ್ incometaxindia.gov.in ನಲ್ಲಿ ಅಪ್‌ಲೋಡ್ ಮಾಡಲಾಗಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ. ಭಾಷೆಯ ಸರಳೀಕರಣ, ಮೊಕದ್ದಮೆಗಳನ್ನು ಕಡಿಮೆ ಮಾಡುವುದು, ಅನುಸರಣೆ ಹೊರೆಯನ್ನು ಕಡಿತಗೊಳಿಸವುದು ಹಾಗೂ ಅನಗತ್ಯ ನಿಯಮಗಳು ಮತ್ತು ನಮೂನೆಗಳನ್ನು ಗುರುತಿಸುವ ಕುರಿತು ಸಲಹೆಗಳನ್ನು ಕೋರಲಾಗಿದೆ.

<><><>

ಭಾರತೀಯ ನೌಕಾಪಡೆಯ ತರಬೇತಿ ನೌಕೆ ಐಎನ್ಎಸ್ ಸುದರ್ಶಿನಿ, ತನ್ನ ಮೊದಲ ಬಂದರು ಭೇಟಿಯನ್ನು ಒಮಾನ್‌ನ ಸಲಾಲಾದಲ್ಲಿ ಮುಕ್ತಾಯಗೊಳಿಸಿತು. ಈ ಭೇಟಿಯು, ಭಾರತ ಮತ್ತು ಒಮಾನ್ ನಡುವಿನ ಐತಿಹಾಸಿಕ ಸಮುದ್ರಯಾನ ಸಂಪರ್ಕಗಳನ್ನು ಮತ್ತು ಎರಡು ನೌಕಾಪಡೆಗಳ ನಡುವಿನ ಸ್ನೇಹವನ್ನು ಬಲಪಡಿಸುತ್ತದೆ. ಇದು

ಹಡಗಿನ ಮಹತ್ವಾಕಾಂಕ್ಷೆಯ ಹತ್ತು ತಿಂಗಳ ಸಾಗರೋತ್ತರ ಪ್ರಯಾಣ, ಲೋಕಾಯಾನ-೨೬ ರಲ್ಲಿ ಒಂದು ಮೈಲಿಗಲ್ಲನ್ನು ಗುರುತಿಸಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಇದು ಭಾರತದ ಶ್ರೀಮಂತ ಕಡಲ ಪರಂಪರೆ ಮತ್ತು ವಸುಧೈವ ಕುಟುಂಬಕಂನ ನೀತಿಯನ್ನು ಜಗತ್ತಿನಾದ್ಯಂತ ಪ್ರದರ್ಶಿಸುವ ಗುರಿ ಹೊಂದಿದೆ.

<><><>

ತಿರುಪತಿಯ ಶ್ರೀ ಕಪಿಲೇಶ್ವರ ಸ್ವಾಮಿ ದೇವಸ್ಥಾನದ ವಾರ್ಷಿಕ ಬ್ರಹ್ಮೋತ್ಸವಗಳು ಇಂದು ಭವ್ಯ ಮತ್ತು ಸಾಂಪ್ರದಾಯಿಕ ಸಮಾರಂಭದೊಂದಿಗೆ ಪ್ರಾರಂಭವಾದವು. ವೈದಿಕ ಮಂತ್ರಗಳ ಪಠಣದೊಂದಿಗೆ, ನಂದಿಯ ಚಿತ್ರವಿರುವ ಪವಿತ್ರ ಧ್ವಜವನ್ನು ಇಂದು ಬೆಳಿಗ್ಗೆ ಶುಭ ಮಕರ ಲಗ್ನದ ಸಮಯದಲ್ಲಿ ಧ್ವಜಸ್ತಂಭದ ಮೇಲೆ ಹಾರಿಸಲಾಯಿತು.

<><><>

ಭಾರತವು ಯುರೋಪ್‌ಗೆ ಬೇರ್ಪಡಿಸಲಾಗದ ಪಾಲುದಾರನಾಗಿ ಮಾರ್ಪಟ್ಟಿದೆ ಎಂದು ಗ್ರೀಕ್ ರಕ್ಷಣಾ ಸಚಿವ ನಿಕೋಸ್ ಡೆಂಡಿಯಾಸ್ ಹೇಳಿದ್ದಾರೆ. ಯುರೋಪಿಯನ್ ಒಕ್ಕೂಟ ಮತ್ತು ವಿಶೇಷವಾಗಿ ಗ್ರೀಸ್‌ಗೆ ಭಾರತದ ಹೆಚ್ಚುತ್ತಿರುವ ಕಾರ್ಯತಂತ್ರ ಮತ್ತು ಆರ್ಥಿಕ ಪ್ರಾಮುಖ್ಯತೆಯನ್ನು ಅವರು ಒತ್ತಿ ಹೇಳಿದ್ದಾರೆ. ಭಾರತ-ಯೂರೋಪಿಯನ್ ಒಕ್ಕೂಟ ವೇದಿಕೆ ೨೦೨೬ ರಲ್ಲಿ ಮಾತನಾಡಿದ ಡೆಂಡಿಯಾಸ್, ಯುರೋಪಿನಲ್ಲಿ ಭಾರತದ ಕುರಿತಾದ ಗ್ರಹಿಕೆಗಳು ಕಾಲಾನಂತರದಲ್ಲಿ ಗಮನಾರ್ಹವಾಗಿ ವಿಕಸನಗೊಂಡಿವೆ ಎಂದು ಹೇಳಿದರು. ಪ್ರಸ್ತುತ ಭಾರತದ ಅಗತ್ಯತೆಯನ್ನು ಒಪ್ಪಿಕೊಂಡಿರುವ ಅವರು, ಆರ್ಥಿಕ ಸಹಕಾರವನ್ನು ಬಿಂಬಿಸುತ್ತಾ, ಯುರೋಪಿಯನ್ ಒಕ್ಕೂಟ ಮತ್ತು ಭಾರತದ ನಡುವಿನ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಬಲವಾದ ಬೆಂಬಲವನ್ನು ವ್ಯಕ್ತಪಡಿಸಿದರು. ಈ ಒಪ್ಪಂದವು ಉಭಯ-ಪಾಲುದಾರರಿಗೆ ಗಣನೀಯ ಪ್ರಯೋಜನಗಳನ್ನು ನೀಡುತ್ತದೆ ಎಂದು ನಿಕೋಸ್ ಡೆಂಡಿಯಾಸ್ ತಿಳಿಸಿದರು.

<><><>

ಭಾರತ- ಅಮೇರಿಕ ಮಧ್ಯಂತರ ವ್ಯಾಪಾರ ಒಪ್ಪಂದವು ನ್ಯಾಯಯುತ, ಸಮಾನ ಮತ್ತು ಸಮತೋಲಿತವಾಗಿದ್ದು, ರೈತರ ಹಿತಾಸಕ್ತಿಗಳ ಸಂಪೂರ್ಣ ರಕ್ಷಣೆಯನ್ನು ಖಚಿತಪಡಿಸುತ್ತದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ. ಮೆಕ್ಕೆಜೋಳ, ಗೋಧಿ, ಅಕ್ಕಿ, ಸಕ್ಕರೆ, ಸೋಯಾಬೀನ್ ಮತ್ತು ಕೋಳಿ ಸೇರಿದಂತೆ ಭಾರತದಲ್ಲಿ ಸಮರ್ಪಕವಾಗಿ ಉತ್ಪಾದಿಸುವ ಕೃಷಿ ಮತ್ತು ಡೈರಿ ಉತ್ಪನ್ನಗಳನ್ನು ಸುಂಕ ರಿಯಾಯಿತಿಗಳಿಂದ ಹೊರಗಿಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

<><><>

ಪುರುಷರ ಟಿ-೨೦ ವಿಶ್ವಕಪ್ ಕ್ರಿಕೆಟ್‌ನಲ್ಲಿ ಇಂದು ಮೂರು ಪಂದ್ಯಗಳು ನಡೆಯಲಿವೆ, ಚೆನ್ನೈನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಆರಂಭವಾಗಿರುವ ದಿನದ ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ಹಾಗೂ ಅಫ್ಘಾನಿಸ್ತಾನ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಆಫ್ಘಾನಿಸ್ತಾನ, ನ್ಯೂಜಿಲೆಂಡ್‌ಗೆ ೧೮೩ ರನ್‌ಗಳ ಗೆಲುವಿನ ಗುರಿ ನೀಡಿದೆ. ಗುರಿ ಬೆನ್ನತ್ತಿರುವ ನ್ಯೂಜಿಲೆಂಡ್ ಇತ್ತೀಚಿನ ವರದಿ ಬಂದಾಗ ೪ ಓವರ್‌ಗಳಲ್ಲಿ ೨ವಿಕೆಟ್ ನಷ್ಟಕ್ಕೆ ೩೧ ರನ್ ಮಾಡಿ ಆಡುತ್ತಿದೆ. ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ, ಮಧ್ಯಾಹ್ನ ೩ ಗಂಟೆಗೆ ಆರಂಭವಾಗಲಿರುವ ಮತ್ತೊಂದು ಪಂದ್ಯದಲ್ಲಿ ಇಂಗ್ಲೆಂಡ್, ನೇಪಾಳ ತಂಡವನ್ನು ಎದುರಿಸಲಿದೆ. ಕೊಲಂಬೊದ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆಯಲಿರುವ ದಿನದ ಮೂರನೇ ಪಂದ್ಯದಲ್ಲಿ ಶ್ರೀಲಂಕಾ ಹಾಗೂ ಐರ್ಲೆಂಡ್ ತಂಡಗಳು ಸೆಣಸಲಿವೆ. ಪಂದ್ಯ ಸಂಜೆ ೭ ಗಂಟೆಗೆ ಆರಂಭವಾಗಲಿದೆ.

<><><>

ದಿನಾಜ್‌ಪುರ ಜಿಲ್ಲಾ ಜೈಲಿನ ಸುಪರ್ದಿಯಲ್ಲಿದ್ದ ಬಾಂಗ್ಲಾದೇಶದ ಮಾಜಿ ಜಲಸಂಪನ್ಮೂಲ ಸಚಿವ ಮತ್ತು ಹಿರಿಯ ಅವಾಮಿ ಲೀಗ್ ನಾಯಕ ರಮೇಶ್ ಚಂದ್ರ ಸೇನ್ ನಿಧನರಾಗಿದ್ದಾರೆ. ಅವರಿಗೆ ೮೫ ವರ್ಷ ವಯಸ್ಸಾಗಿತ್ತು. ಅವರು ಬಹುದಿನಗಳಿಂದ ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು ಎಂದು ವರದಿಯಾಗಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>